ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು-560009.

ಸಂಖ್ಯೆ: ಆಡಳಿತ/90/2018-19 ದಿನಾಂಕ: 06/06/2018

# ಸುತ್ತೋಲೆ

ವಿಷಯ: 2018-19ನೇ ಸಾಲಿನ ವರ್ಗಾವಣೆಗೆ ಸಂಬಂಧಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ (ಗ್ರೂಪ್-ಎ, ಬಿ, ಸಿ, ಡಿ) ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರ ಮಂಜೂರು/ ಕಾರ್ಯನಿರತ/ ಖಾಲಿ ಹುದ್ದೆಗಳ ಮಾಹಿತಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ: 1 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ನಿಯಮಗಳು 2011 ಹಾಗೂ ಕಾಲಕಾಲಕ್ಕೆ ಆದ ತಿದ್ದುಪಡಿಗಳು.

2 ಸರ್ಕಾರದ ಆದೇಶದ ಸಂಖ್ಯೆಆಕುಕ 50 ಹೆಚ್ಎಸ್‌ಹೆಚ್ 2018, ದಿನಾಂಕ : 10/05/2018

*****

2018-19ನೇ ಸಾಲಿನ ಸಾರ್ವತ್ರಿಕ ವರ್ಗಾವಣೆಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯಲ್ಲಿ ಕೌನ್ಸಿಲಿಂಗ್ ವರ್ಗಾವಣೆ ಜಾರಿಯಲಿದ್ದು, ಉಲ್ಲೇಖ(1)ರ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ ನಿಯಮಗಳು 2011 ಮತ್ತು ತಿದ್ದುಪಡಿಗಳ ಅನ್ವಯ ಕ್ರಮ ಕೈಗೊಳ್ಳಲಾಗುವುದು.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಪ್ರಸಕ್ತ ಸಾಲಿನ ಸಾರ್ವತ್ರಿಕ ವರ್ಗಾವಣೆ ಪ್ರಕ್ರಿಯೆ ಪ್ರಾರಂಭಿಸಿ ನಿಯಮಾನುಸಾರ ಅಗತ್ಯ ಮಾಹಿತಿ ಕ್ರೂಢೀಕರಿಸುವ ಹಾಗೂ ಪರಿಶೀಲನಾ ಕಾರ್ಯ ಕೈಗೊಳ್ಳುವಂತೆ ನಿರ್ದೇಶಿಸಿದೆ. ಅಂತೆಯೇ ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:04/06/2018 ರಂದು ನಡೆದ ಸಭೆಯ ನಡವಳಿಯ ತೀರ್ಮಾನದಂತೆ, ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಎಲ್ಲಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ (ಗ್ರೂಪ್-ಎ, ಬಿ, ಸಿ, ಡಿ) ಅಧಿಕಾರಿ ಮತ್ತು ಸಿಬ್ಬಂದಿಯವರ ಮಂಜೂರು/ ಕಾರ್ಯನಿರತ/ ಖಾಲಿ ಹುದ್ದೆಗಳ ಮಾಹಿತಿಯನ್ನು ಎಕ್ಸೆಲ್ ಶೀಟ್‌ನಲ್ಲಿ ಕಳುಹಿಸುವುದು. (ಪಿಡಿಎಫ್ ಫಾರ್ಮಾಟ್‌ನಲ್ಲಿ ಕಳುಹಿಸಬಾರದು).

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ತಮ್ಮ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ತಾಲ್ಲೂಕು ಆರೋಗ್ಯಾಧಿಕಾರಿಗಳ ಕಛೇರಿ, ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಲ್ಲಿರುವ ಮಂಜೂರು, ಕಾರ್ಯನಿರತ, ಖಾಲಿ ಹುದ್ದೆಗಳ ಮಾಹಿತಿಗಳನ್ನು ಸಂಬಂಧಪಟ್ಟವರಿಂದ ಪಡೆದು ಹುದ್ದೆವಾರು ಪ್ರತ್ಯೇಕವಾಗಿ ಈ ಕೆಳಕಂಡ ನಮೂನೆಯಲ್ಲಿರುವಂತೆ ಕ್ರೂಢೀಕರಿಸಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ದೃಢೀಕರಿಸಿ ಒಬ್ಬ ಜವಾಬ್ದಾರಿಯುತ ಅಧಿಕಾರಿ ಅಥವಾ ಸಿಬ್ಬಂದಿಯನ್ನು ನಿಯೋಜಿಸಿ ಖುದ್ದಾಗಿ ನಿರ್ದೇಶನಾಲಯದ ಸಂಬಂಧಪಟ್ಟ ಸಂಕಲನದ ವಿಷಯ ನಿರ್ವಾಹಕ/ಕಛೇರಿ ಅಧೀಕ್ಷಕರಿಗೆ ಸಲ್ಲಿಸುವುದು.

## ನಮೂನೆ

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಸಂಸ್ಥೆಯ ಹೆಸರು | ಸ್ಥಳ (ಊರು) | ಹುದ್ದೆ | ಪದನಾಮ | ಮಂಜೂರು | ಕಾರ್ಯ ನಿರತ | ಖಾಲಿ ಇರುವ | ಷರಾ |
|---|---|---|---|---|---|---|---|---|---|---|
| | | | | | | | | | | |

2....

ಸದರಿ ಮಾಹಿತಿಯ ಹಾರ್ಡ್ ಮತ್ತು ಸಾಫ್ಟ್ ಕಾಪಿಯನ್ನು (ಪೆನ್ ಡ್ರೈವ್‌ನಲ್ಲಿ) ಪ್ರತ್ಯೇಕವಾಗಿ ಹುದ್ದೆವಾರು ಮಾಹಿತಿಯನ್ನು **ದಿನಾಂಕ:11/06/2018 ರಂದು ಸಂಜೆ 5.00** ಗಂಟೆಯೊಳಗಾಗಿ ಈ ನಿರ್ದೇಶನಾಲಯಕ್ಕೆ ಸಲ್ಲಿಸಿ ಸ್ವೀಕೃತಿಯನ್ನು ಪಡೆಯಲು ಸೂಚಿಸಿದೆ. ಅಧೀನ ಕಛೇರಿಗಳು ನೀಡುವ ಮಾಹಿತಿಯನ್ನು ಪರಿಶೀಲಿಸಿ ಸಲ್ಲಿಸುವುದು, ಸಲ್ಲಿಸಿದ ಮಾಹಿತಿಯಲ್ಲಿ ಲೋಪದೋಷಗಳೇನಾದರೂ ಇದ್ದಲ್ಲಿ ಅದನ್ನು ಪರಿಶೀಲಿಸಿದ ವಿಷಯ ನಿರ್ವಾಹಕರು, ಕಛೇರಿ ಅಧೀಕ್ಷಕರು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ದೃಢೀಕರಿಸಿದ ಮೇಲಾಧಿಕಾರಿಯನ್ನೇ ನೇರ ಹೊಣೆಗಾರರನ್ನಾಗಿ ಮಾಡಿ ಅವರುಗಳ ವಿರುದ್ಧ ಕ.ನಾ.ಸೇ.(ಸಿಸಿಎ)ನಿಯಮ 1957 ರಡಿ ಶಿಸ್ತು ಕ್ರಮ ಜರುಗಿಸಲಾಗುವುದು.

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,
ಬೆಂಗಳೂರು

ಇವರಿಗೆ :-

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು.
2. ಎಲ್ಲಾ ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ
3. ಎಲ್ಲಾ ವೈದ್ಯಕೀಯ ಅಧೀಕ್ಷಕರುಗಳಿಗೆ ಕೆ.ಸಿ. ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಜಯನಗರ ಜನರಲ್. ಆಸ್ಪತ್ರೆ, ಹೆಚ್.ಎಸ್.ಘೋಷ ಆಸ್ಪತ್ರೆ, ಸರ್.ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ ಇಂದಿರಾನಗರ ಬೆಂಗಳೂರು.
4. ಎಲ್ಲಾ ಸ್ವಾಯತ್ತ ಸಂಸ್ಥೆಗಳು.

**ಪ್ರತಿಯನ್ನು ಮಾಹಿತಿಗಾಗಿ ಸಲ್ಲಿಸಿದೆ:**

1. ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳವರ ಆಪ್ತಶಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು
2. ಆಯುಕ್ತರು, ಆಕುಕ ಸೇವೆಗಳ ನಿರ್ದೇಶನಾಲಯದ ಆಪ್ತ ಶಾಖೆ, ಬೆಂಗಳೂರು
3. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ (ಎನ್.ಹೆಚ್.ಎಂ), ಬೆಂಗಳೂರು
4. ನಿರ್ದೇಶಕರು, ಆಕುಕ ಸೇವೆಗಳ ನಿರ್ದೇಶನಾಲಯ, ಆಪ್ತಶಾಖೆ, ಬೆಂಗಳೂರು
5. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ದನ್ವಂತರಿ ರಸ್ತೆ, ಬೆಂಗಳೂರು,
6. ನಿರ್ದೇಶಕರು, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಸ್ಥೆ, ಮಾಗಡಿ ರಸ್ತೆ, ಬೆಂಗಳೂರು
7. ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಆಕುಕ ಸೇವೆಗಳ ನಿರ್ದೇಶನಾಲಯ, ಬೆಂಗಳೂರು
8. ಅಪರ ನಿರ್ದೇಶಕರು, ಕರ್ನಾಟಕ ಸ್ಟೇಟ್ ಡ್ರಗ್ಸ್ ಅಂಡ್ ಲಾಜಿಸ್ಟಿಕ್ಸ್ ವೇರ್ ಹೌಸಿಂಗ್ ಸೊಸೈಟಿ, ಬೆಂಗಳೂರು.
9. ಮುಖ್ಯ ಆಡಳಿತಾಧಿಕಾರಿಗಳು, ಆಕುಕ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ರವರ ಆಪ್ತಶಾಖೆ.
10. ಆಡಳಿತಾಧಿಕಾರಿಗಳು (ಸಾಮಾನ್ಯ)(ಸಾರಿಗೆ)(ಕುಟುಂಬ ಕಲ್ಯಾಣ), ಆಕುಕ ಸೇವೆಗಳು, ಬೆಂಗಳೂರು
11. ಸಹಾಯಕ ಆಡಳಿತಾಧಿಕಾರಿಗಳು, ಜೆ.ಆರ್.ಓ. / ಹೆಚ್.ಆರ್.ಓ. ಆಕುಕ ಸೇವೆಗಳು, ಬೆಂಗಳೂರು
12. ಸಂಬಂದಪಟ್ಟ ಎಲ್ಲಾ ಕಛೇರಿ ಅಧೀಕ್ಷಕರು/ವಿಷಯ ನಿರ್ವಾಹಕರು (ಸಿಬ್ಬಂದಿ ವಿಭಾಗ)
13. ಇಲಾಖೆಯ ಅಧಿಕೃತ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
14. ಕಛೇರಿ ಪ್ರತಿ.